

# ಮುದ ನೀಡುವ ಸುಗಂಧ ದ್ರವ್ಯ

ಸುಗಂಧ ದ್ರವ್ಯಗಳು ಜೀವನಶೈಲಿಯ ಒಂದು ಭಾಗವಾಗಿದೆ. ಮನೆ, ಕಚೇರಿ, ವಾಹನ, ಹವಾನಿಯಂತ್ರಿತ ಕೊಠಡಿ, ರೈಲು, ವಿಮಾನ, ಶೌಚಾಲಯ, ಹೋಟೆಲ್ ರೂಮ್‌ಗಳಲ್ಲಿ ಸುಗಂಧ ದ್ರವ್ಯದ ಬಳಕೆ ಹೆಚ್ಚು.

■ ಉಮಾ

ಗೆಳತಿ ಸುಮತಿ ಮನೆಗೆ ಹೋದರೆ ಮನೆಯೆಲ್ಲ ಘಮಘಮ ಪರಿಮಳ. ಹಾಲ್‌ನಲ್ಲಿ ಮಲ್ಲಿಗೆಯ ಸುಗಂಧ ಹರಡಿದ್ದರೆ ರೂಮ್‌ನಲ್ಲಿ ಸಂಪಿಗೆಯ ಕಂಪು. ಅಡುಗೆ ಮನೆಗೆ ಕಾಲಿಟ್ಟರೆ ಬೆಳ್ಳುಳ್ಳಿ, ಈರುಳ್ಳಿ ಒಗ್ಗರಣೆಯ ಸುದ್ದಿಯೇ ಇಲ್ಲ, ಬದಲಾಗಿ ತಾಜಾ ತಾಜಾ ಸುಗಂಧರಾಜ ಹೂವಿನ ಸುವಾಸನೆ. ಬಾತ್‌ರೂಮ್‌ನಲ್ಲೂ ನವಿರಾದ ಭಾವನೆಗೆ ಸ್ಪಂದಿಸುವಂತಹ ಎಂತದೋ ಘಮಲು ಮೂಗಿಗೆ ಅಡರಿತ್ತು. ಒಟ್ಟಿನಲ್ಲಿ ಇಡೀ ಮನೆಯೇ ತಾಜಾ ಹೂವಿನ ಸುಗಂಧದಿಂದ ಘಮಘಮಿಸುತ್ತಿತ್ತು.

ಯಾಕೋ ಈ ಮನೆ ಬೇರೆ ಮನೆಗಳಂತಿಲ್ಲ ಎನಿಸಿತು. ಪಕ್ಕದಲ್ಲಿದ್ದ ಗೆಳತಿಯನ್ನು ಕೇಳಿದರೆ ಮನೆಯಲ್ಲಿ ಎಲ್ಲರಿಗೂ ಸುಗಂಧ ದ್ರವ್ಯವನ್ನು ಬಳಸುವ ಗೀಳು. ವಿಧ ವಿಧ ಸುಗಂಧ ಸಿಂಪಡಿಸಿ ಕೆಟ್ಟ ವಾಸನೆ ಹೋಗಲಾಡಿಸಿ ತಾಜಾ ಸುಗಂಧ ಮನೆ ತುಂಬ ಹರಡುವಂತೆ ಮಾಡುತ್ತಿದ್ದೇವೆ ಎಂದು ವಿವರಣೆ ನೀಡಿದಳು.

ಕೆಲವರು ತಮ್ಮ ಮನೆಗಳಲ್ಲಿ ಬಾತ್‌ರೂಮ್ ಪರಿಮಳ ಬರಲೆಂದು ಸುವಾಸನೆ ಬೀರುವ ಸುಗಂಧ ದ್ರವ್ಯ ಸ್ಪ್ರೇ ಮಾಡಿದರೆ ಇನ್ನು ಕೆಲವರು ಸುಗಂಧದ ಕೇಕ್ ಅನ್ನು ವಾಸನೆ ನಿವಾರಣೆಗೆ ಬಳಸುತ್ತಾರೆ. ಶುಭ ಸಮಾರಂಭಕ್ಕೆ ಹೋಗುವಾಗ ಅತ್ತರನ್ನು ಸಿಂಪಡಿಸಿ ಹೋಗದಿದ್ದರೆ ಕೆಲವರಿಗೆ ಸಮಾಧಾನವೇ ಇಲ್ಲ. ಇನ್ನು ಕೆಲವರು ಬೆವರಿನ ವಾಸನೆ ನಿರ್ಮೂಲನೆಗೆ ಸುಗಂಧ ದ್ರವ್ಯ ಬಳಸುವುದುಂಟು. ಮದುವೆ ಮನೆಗಳಲ್ಲಂತೂ ವಧೂವರರಿಂದ ಹಿಡಿದು ಎಲ್ಲರೂ ಅತ್ತರನ್ನು ಸಿಂಪಡಿಸಿಕೊಂಡು ಅದರ ಘಮಲಿನಲ್ಲಿ ಓಡಾಡುವವರೇ. ಕೆಲವು ಸಂಪ್ರದಾಯಗಳಲ್ಲಿ ಮದುವೆಗಳಿಗೆ ಅತ್ತರು ಬೇಕೇ ಬೇಕು.

ಸುಗಂಧ ದ್ರವ್ಯಗಳು ಜೀವನಶೈಲಿಯ ಒಂದು ಭಾಗವಾಗಿದೆ. ಮನೆ, ಕಚೇರಿ, ವಾಹನ, ಹವಾನಿಯಂತ್ರಿತ ಕೊಠಡಿ, ರೈಲು, ವಿಮಾನ, ಶೌಚಾಲಯ, ಹೋಟೆಲ್ ರೂಮ್‌ಗಳಲ್ಲಿ ಸುಗಂಧ ದ್ರವ್ಯದ ಬಳಕೆ ಹೆಚ್ಚು. ಕಾರಣ ಇಷ್ಟೆ. ಇದು ದುರ್ವಾಸನೆಯನ್ನು ಹೋಗಲಾಡಿಸಿ ವಾತಾವರಣವನ್ನು ಫ್ರೆಶ್ ಆಗಿಸುತ್ತದೆ ಎಂಬುದು. ಘಮಘಮಿಸುವ ಸುಗಂಧ ಭಾವನಾತ್ಮಕವಾಗಿಯೂ ಹೆಚ್ಚು ಸ್ಪಂದಿಸುವಂತೆ ಮಾಡುತ್ತದೆ. ಯಾವುದೇ ರೀತಿಯ ಕೆಟ್ಟ ವಾಸನೆಯನ್ನು ನಿವಾರಿಸಿ ಸುಮಧುರ ಪರಿಮಳ ಜನರ ಇರುವಿಕೆಗೆ ಆಸ್ಪದ ನೀಡುತ್ತದೆ.

ಇತ್ತೀಚೆಗೆ ಮನೆಗಳಲ್ಲೂ ಸುಗಂಧ ದ್ರವ್ಯದ ಬಳಕೆ ಹೆಚ್ಚಾಗಿದೆ. ಕೊಠಡಿಗಳಲ್ಲಿ, ಶೌಚಾಲಯಗಳಲ್ಲಿ ಸುಗಂಧ ಸ್ಪ್ರೇ ಮಾಡಿದರೆ ಕ್ರಿಮಿಕೀಟಗಳೂ ಎಂಟ್ರಿ ಕೊಡಲಾರವು. ಮೈಮನಕ್ಕೂ ಉಲ್ಲಾಸದಾಯಕ ಎಂಬುದು ಸುಗಂಧ ದ್ರವ್ಯ ತಯಾರಿಕಾ ಕಂಪೆನಿಗಳ ಅಭಿಮತ. ರಾಸಾಯನಿಕ ಮುಕ್ತವಾದ ಸುಗಂಧ, ಹರ್ಬಲ್ ಸುಗಂಧ, ನೈಸರ್ಗಿಕ ಪದಾರ್ಥಗಳಿಂದ ತಯಾರಿಸಿದ ಸುಗಂಧ, ತಾಜಾ ಮಲ್ಲಿಗೆ, ಗುಲಾಬಿ, ಸಂಪಿಗೆಯ ಕಂಪನ್ನು ಸೂಸುವ, ಮೈಮನವನ್ನು ತಂಪಾಗಿಸುವ ಸುಗಂಧ.. ಹೀಗೆ ತರಾವರಿ ಸುಗಂಧ ದ್ರವ್ಯಗಳು ಮಾರುಕಟ್ಟೆಯಲ್ಲಿ ಪೈಪೋಟಿ ನಡೆಸುತ್ತಿವೆ. ಸಣ್ಣ ಉದ್ಯಮವಾಗಿ ಮನೆಗಳಲ್ಲೂ ಸುಗಂಧ ದ್ರವ್ಯ ತಯಾರಿಸುವವರಿದ್ದಾರೆ; ದೊಡ್ಡ ಪ್ರಮಾಣದಲ್ಲಿ ತಯಾರಿಸಿ ವಿದೇಶಗಳಿಗೂ ಸುಗಂಧದ ಕಂಪನ್ನು ಹರಡುವ ಬೃಹತ್ ಕಂಪೆನಿಗಳೂ ಲಾಭದತ್ತ ದಾಪುಗಾಲು ಹಾಕುತ್ತಿವೆ. ಕಾಲ ಬದಲಾದಂತೆ ಜನರ ಮನೋಭಾವನೆ, ಅಭಿರುಚಿ, ಅಭಿಲಾಷೆಗಳೂ ಬದಲಾಗುತ್ತಿವೆ. ಒಂದು ಹೊಸ ಕಾರು ಕೊಂಡರೂ ಇದರೊಳಗೆ ಸಿಂಪಡಿಸಲು ಸುಗಂಧ ದ್ರವ್ಯ ಅನಿವಾರ್ಯ ಎಂಬ ಮಟ್ಟಕ್ಕೆ ಬೇಡಿಕೆ ವಿಸ್ತರಿಸಿದೆ.

## ಆ್ಯಂಬಿಪೂರ್ ಕೊಡುಗೆ

ಆ್ಯಂಬಿಪೂರ್ ಏರ್ ಫ್ರೆಶ್ನರ್ ಆಗಿದ್ದು, ಮನೆಗಳಿಗೇ ವಿಶೇಷವಾಗಿ ರೂಪಿಸಲಾದ ಸುಗಂಧ. ಇದು ಮನೆಯೊಳಗಿನ ದುರ್ವಾಸನೆಯನ್ನು ಸಂಪೂರ್ಣವಾಗಿ ಹೋಗಲಾಡಿಸುತ್ತದೆ.

'ಮನೆಯೊಳಗೆ ವಿವಿಧ ರೀತಿಯ ವಾಸನೆಗಳಿರುತ್ತವೆ. ಇದನ್ನು ನಿವಾರಿಸಲು ಗೃಹಿಣಿ ಹರಸಾಹಸ ಮಾಡಬೇಕಾಗುತ್ತದೆ. ಅಡುಗೆ ಮನೆಯಲ್ಲಿ ಬೆಳ್ಳುಳ್ಳಿ, ಈರುಳ್ಳಿ ಹುರಿದದ್ದು, ಅಡುಗೆ ಎಣ್ಣೆ, ಒಗ್ಗರಣೆ ಇತ್ಯಾದಿ, ಮಾಂಸಾಹಾರ ಅದರಲ್ಲೂ ಹುರಿದ ಮೀನಿನ ವಾಸನೆ ಬೇಗನೆ ಹೋಗುವುದೇ ಇಲ್ಲ. ಈ ಎಲ್ಲದರ ನಿವಾರಣೆಗಾಗಿ ಮನೆಗಳಲ್ಲಿ ಸುಗಂಧ ದ್ರವ್ಯ ಬಳಸುವುದು ಅನಿವಾರ್ಯ' ಎನ್ನುತ್ತಾರೆ ಮುಂಬಯಿಯಲ್ಲಿರುವ ಆ್ಯಂಬಿಪೂರ್ ಸುಗಂಧ ದ್ರವ್ಯ ಕಂಪೆನಿಯ ನಿರ್ದೇಶಕ ಬೊಮನ್ ಇರಾನಿ.

ದೇಶದಲ್ಲಿ ಸುಗಂಧ ದ್ರವ್ಯ ಬಳಸುವವರ ಬಗ್ಗೆ ಮಾಹಿತಿ ಕಲೆ ಹಾಕಲು ಆ್ಯಂಬಿಪೂರ್ ಸುಗಂಧ ಕಂಪೆನಿ ಇಂಡಿಪೆಂಡೆಂಟ್ ಥರ್ಡ್ ಪಾರ್ಟಿ ಏಜೆನ್ಸಿ ಸಹಯೋಗದಲ್ಲಿ ಇತ್ತೀಚೆಗೆ ಸಮೀಕ್ಷೆಯೊಂದನ್ನು ಏರ್ಪಡಿಸಿತ್ತು. ಇದರ ಪ್ರಕಾರ ಶೇಕಡಾ 92ರಷ್ಟು ಮಹಿಳೆಯರು ಮನೆಗಳಲ್ಲಿ ಸುಗಂಧ ದ್ರವ್ಯ ಬಳಸುತ್ತಿದ್ದಾರೆ ಎಂಬುದು ಗೊತ್ತಾಗಿದೆ. ಇದರಲ್ಲಿ ಶೇಕಡಾ 88ರಷ್ಟು ಮಹಿಳೆಯರು ಮನೆಯಲ್ಲಿ ಕೆಟ್ಟ ವಾಸನೆ ಬರದಂತೆ ತಡೆಯಲು ಪ್ರತಿದಿನ ಸುಗಂಧ ಬಳಸುತ್ತಿದ್ದಾರೆ. ಮನೆ ಸುವಾಸನೆಯುಕ್ತವಾಗಿದ್ದರೆ ಅತಿಥಿಗಳನ್ನು ಕರೆಯಲು ಯಾವುದೇ ಮುಜುಗರವಾಗುವುದಿಲ್ಲ ಎಂದು ಶೇಕಡಾ 91ರಷ್ಟು ಮಹಿಳೆಯರು ಅಭಿಪ್ರಾಯ ವ್ಯಕ್ತಪಡಿಸಿದರು. ಈ ಸಮೀಕ್ಷೆಯಲ್ಲಿ ಮಹಿಳೆಯರು ವ್ಯಕ್ತಪಡಿಸಿದ ಅಭಿಪ್ರಾಯದ ಹಿನ್ನೆಲೆಯಲ್ಲಿ ಆ್ಯಂಬಿಪೂರ್ ಮನೆಗಳಲ್ಲಿ ಸುಗಂಧ ದ್ರವ್ಯದ ಬಳಕೆ ಅನಿವಾರ್ಯ ಎಂದು ಭಾವಿಸಿದೆ. ಸಮೀಕ್ಷೆಗೆ 992 ಜನರನ್ನು ಬಳಸಿಕೊಳ್ಳಲಾಗಿದ್ದು ಮುಂಬಯಿ, ದೆಹಲಿ, ಚೆನ್ನೈಗಳಲ್ಲಿ 2015ರ ಏಪ್ರಿಲ್ ತಿಂಗಳಿನಲ್ಲಿ ಇದನ್ನು ಕೈಗೊಳ್ಳಲಾಗಿದೆ.

'ಆ್ಯಂಬಿಪೂರ್ ಸುಗಂಧ ಎಲ್ಲ ಮನೆಗಳಿಗೂ ಬಳಕೆಗೆ ಯೋಗ್ಯವಾದವು. ಇದರ ಸ್ಲೋಗನ್ 'ಸ್ಮೆಲ್ಲಿ ಟು ಸ್ಮೈಲಿ..' ಮನೆಯಲ್ಲಿ ಈ ಸುಗಂಧವನ್ನು ಯಾವಾಗಲೂ ಬಳಸಬಹುದು ಎನ್ನುತ್ತಾರೆ ಬೊಮನ್ ಇರಾನಿ.

■